SRI H. C. SRIKANTAIAH (Minister of State for Minor Irrigation and Protocol).—

(*a*) No.

(*b*) No.

(*c*) Yes.

ಶ್ರೀ ಕೆ. ಸಿದ್ದಯ್ಯ.—ಕೆರೆ ಅಂಗಳದಲ್ಲಿ ಮರಗಳು ಮತ್ತು ಪೊಲ್ಲು ಬೆಳೆಸುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ತಿಳಿಸಿದ್ದೀರಿ. ಈ ಒಂದು ಉದ್ದೇಶಕ್ಕಾಗಿ ಕೆರೆ ಅಂಗಳವನ್ನು ಕೊಡುವುದರಿಂದ ಉಂಟಾಗುವ ತೊಂದರೆ ಏನು ? ಏಕೆಂದರೆ ಈ ಒಂದು ಕೆಲಸವನ್ನು ಖಾಸಗಿಯವರಿಗೆ ಕೊಟ್ಟರೆ ಅದಕ್ಕೆ ಕಾವಲು ಕಾಯುವುದು, ನೋಡಿಕೊಳ್ಳುವುದು ಕಷ್ಟವಾಗುತ್ತದೆ ಆದ್ದರಿಂದ ಈ ಜಾಗಗಳನ್ನು ಪೊಲ್ಲು ಮತ್ತು ಮರಗಳನ್ನು ಬೆಳೆಸುವುದಕ್ಕೆ ಲೀಸ್ ಮಾಡುವುದು ಒಳ್ಳೆಯದು ಅಲ್ಲವೆ ?

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಕೆರೆ ಅಂಗಳವನ್ನು ಈ ಉದ್ದೇಶಕ್ಕೆ ಕೊಡುವುದರಿಂದ ಕೆರೆ ಮುಚ್ಚುವುದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಕೆರೆಗೆ ನೀರೂ ಬರುವುದಿಲ್ಲ, ಆಲ್ಲಿ ಮರ ಗಿಡಗಳನ್ನು ಬೆಳೆಸಿದರೆ ಕೆರೆ ಮುಚ್ಚುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುವುದಿಲ್ಲ,

ಶ್ರೀ ಕೆ. ಸಿದ್ದಯ್ಯ.—ಈ ಪ್ರಶ್ನೆಯ (ಇ)ಗೆ ಉತ್ತರವಾಗಿ ಹೌದು ಅಂತ ಹೇಳಿದ್ದೀರಿ. ಅವರಿಗೆ ಯಾವ ರೀತಿ ಉತ್ತೇಜನ ಕೊಡುವುದಕ್ಕೆ ಸಾಧ್ಯ ಅನ್ನುವುದನ್ನು ಹೇಳುತ್ತೀರಾ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈಗಾಗಲೇ ಈ ಬಗ್ಗೆ ಒಂದು ಸರ್ಕಾರಿ ಆಜ್ಞೆ ಹೊರಡಿಸಿದೆ ಅದು ಈ ರೀತಿ ಇದೆ.—"they have already decided as a matter of policy to issue Sannadhs and also to have that on roadsided" ಅವರುಗಳು ತಮ್ಮ ಜಮೀನಿನಲ್ಲಿ ಹಾಕಿಕೊಂಡಿರತಕ್ಕಂಥಾ ಮರಗಳಾಗಲಿ ಅಥವಾ ಹಣ್ಣು ಗಿಡಗಳಾಗಲಿ ಇದ್ದರೆ ಅವರು ಅದರ ಫಲವನ್ನು ಅನುಭವಿಸತಕ್ಕಂಥಾ ಬಗ್ಗೆ ಸರ್ಕಾರ ಈಗಾಗಲೇ ಒಂದು ಆಜ್ಞೆಯನ್ನು ಹೊರಡಿಸಿದೆ.

MADAM SPEAKER.—Questions are over.

Message from the Chairman L.C.

ANNOUNCEMENT

MADAM SPEAKER.—I have received the following Message from the Chairman, Legislative Council.

As required by rule 99 (1) of the Rules of Procedure and conduct of Business in the Karnataka Legislative Council I send herewith the Bangalore Development Authority (Amendment)Bill, 1977 as amended by the Legislative Assembly and agreed to by the Legislative Council on 7th April, 1977.

CALLING ATTENTION TO MATTERS OF URGENT PUBLIC IMPORTANCE

(*i*) ***re*** : *Scarcity of water in Sindgi taluk.*

ಶ್ರೀ ಎಸ್. ವೈ. ಸಾಟೀಲ್ (ಸಿಂದಗಿ).—ಅಧ್ಯಕ್ಷರೇ, ಸಿಂದಗಿ ತಾಲ್ಲೂಕಿನಲ್ಲಿ ನೀರಿನ ತೀವ್ರ ಅಭಾವದ ವಿಚಾರದ ಬಗ್ಗೆ ಗ್ರಾಮಾಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ಯದ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ,